**ಕರ್ನಾಟಕ ರಕ್ಷಣಾ ವೇದಿಕೆ**

ಪ್ರೀತಿಯ ಕನ್ನಡಿಗರೇ,

ಈ ದಿನ ನಮ್ಮ ನಾಡಿನ ತುಂಬೆಲ್ಲ ಸಂಭ್ರಮದ ಹಬ್ಬ. ಕೆಲ ಐತಿಹಾಸಿಕ ಕಾರಣಗಳಿಂದಾಗಿ ಒಡೆದು ಹಂಚಿಹೋಗಿದ್ದ ನಮ್ಮ ತಾಯಿನಾಡು ಒಂದುಗೂಡಿದ ಐವತ್ತೊಂದನೆಯ ಹುಟ್ಟುಹಬ್ಬ. ಈ ದಿನ ನಿಮ್ಮೊಂದಿಗೆ ಹಂಚಿಕೊಳ್ಳಬೇಕಾದ ಕೆಲಮಾತುಗಳಿವೆ.
ಈ ನಮ್ಮ ತಾಯಿನಾಡು, ಇಂದಿನ ಈ ರೂಪದಲ್ಲಿ ಒಂದಾಗಿರಲು ಕಾರಣವಾದದ್ದು ಆಲೂರು ವೆಂಕಟರಾಯರಂತಹ ದಾರ್ಶನಿಕರ ದೂರದೃಷ್ಟಿ. ಕನ್ನಡಿಗ ಮರೆತೇ ಹೋಗಿದ್ದ ತನ್ನ ಹಿರಿಯರು, ಅವರ ಸಾಧನೆಗಳು, ಹಿರಿಮೆಗಳು, ವೈಭವದ ದಿನಗಳು, ಶೌರ್ಯ ಸಾಹಸಗಳು, ಇವೆಲ್ಲವುಗಳ ಇತಿಹಾಸವನ್ನು ಹುಡುಕಿ ಹೆಕ್ಕಿ ಪೋಣಿಸಿ ನಾಡ ಜನತೆಗೆ ನೀಡಿ ಅವರೆದೆಯಲ್ಲಿ ಅದಮ್ಯ ನಾಡಪ್ರೇಮದ ಪ್ರೇರಣೆ ನೀಡಿದ ಮಹನೀಯರು ಅವರು. ನಾಡು ಕೂಡಲು ಕಾರಣವಾದ ನಾನಾ ಸಂಸ್ಥೆಗಳು, ನಾನಾ ವ್ಯಕ್ತಿಗಳು ಇವರೆಲ್ಲರನ್ನು ಮನದುಂಬಿ ನೆನೆಯಬೇಕಾದ ದಿನ ಇಂದು. ಈ ದಿನವನ್ನು ನಾವು ಹಬ್ಬವಾಗಿ ಆಚರಿಸುತ್ತಿದ್ದೇವೆ ನಿಜ. ಈ ಹಬ್ಬ ಬರಿಯ ಆಚರಣೆಗೆ ಮಾತ್ರಾ ಸೀಮಿತವಾಗದೆ ನಮ್ಮೆಲ್ಲರ ಎದೆಯಲ್ಲಿ ನಾಡು ಕಟ್ಟಲು ಬೇಕಾದ ಸಂಕಲ್ಪವನ್ನು ಕೈಗೊಳ್ಳುವ ದಿನವಾಗಲಿ.
ಈ ನಮ್ಮ ತಾಯಿನಾಡು ಜಗತ್ತಿನ ಭೂಪಟದಲ್ಲಿ ಸಮೃದ್ಧಿ, ಸುಖಶಾಂತಿಗಳಿಗೆ ಹೆಸರಾದ ನಾಡಾಗುವಂತೆ ಮಾಡಬೇಕಾಗಿದೆ. ಕನ್ನಡಿಗ ಎಲ್ಲ ಕ್ಷೇತ್ರಗಳಲ್ಲಿನ ಪರಿಣಿತಿ ಸಾಧಿಸಬೇಕಾಗಿದೆ. ಕನ್ನಡ ನಾಡು ಎಲ್ಲ ಸಾಧನೆಗಳಿಗೆ ತಾಣವಾಗಬೇಕಾಗಿದೆ. ಕನ್ನಡ ನುಡಿ ನಮ್ಮ ನಾಡಿನ ಸಾರ್ವಭೌಮ ಭಾಷೆಯಾಗಬೇಕಾಗಿದೆ. ಬನ್ನಿ, ಇದೆಲ್ಲವನ್ನೂ ಸಾಧಿಸಲು ನಾವೆಲ್ಲ ಒಂದಾಗಿ ದುಡಿಯೋಣ. ಕನ್ನಡಿಗರ ಏಳಿಗೆ ಕರುನಾಡಿನ ಏಳಿಗೆ ಇಡೀ ಭಾರತ ದೇಶಕ್ಕೆ ಮಾದರಿಯಾಗಲಿ. ಕನ್ನಡ ಕುಲಪುರೋಹಿತರಾದ ಆಲೂರು ವೆಂಕಟರಾಯರಂದಂತೆ ಬಲಿಷ್ಟ ಕರ್ನಾಟಕವನ್ನು ಕಟ್ಟೋಣ, ಆ ಮೂಲಕ ಬಲಿಷ್ಟ ಭಾರತವನ್ನು ಕಟ್ಟೋಣ.

ವಂದನೆಗಳು

ನಿಮ್ಮ ಕನ್ನಡ ಸೇವಕ

ಟಿ. ಎ. ನಾರಾಯಣ ಗೌಡ